127

ಚಾಮುಂಡೇಶ್ವರಿ ವಿದ್ಯುತ್‌ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಅಧೀಕ್ಷಕ ಇಂಜನಿಯರ್ (ವಿ), ರವರಕಛೇರಿ,
ಕಾ ಮತ್ತು ಪಾ ವೃತ್ತ, ಚಾ.ನಗರ – ಕೊಡಗು,
ಶ್ರೀ ಹರ್ಷರಸ್ತೆ, ಮೈಸೂರು.
ದೂರವಾಣಿ: 0821–2420850

CHAMUNDESHWARI ELECTRICITY SUPPLY CORPORATION LIMITED
*(A Government of Karnataka Undertaking)*
O&M Circle, Chamarajanagar-Kodagu,
MPL Compound, Sri Harsha Road,
Mysuru-570001.
Web site: www.cescmysore.org
E-mail ID: seechnkodagu@cescmysore.org

Company Identity Number (CIN):U40109KA2004SGC035177

ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ-127/2022-23/ 6458-6480 ದಿನಾಂಕ: 30.03.2023

## ಸಭೆಯ ನಡಾವಳಿಗಳು

**ದಿನಾಂಕ 23.02.2023 ರಂದು ವಿರಾಜಪೇಟೆ ಉಪವಿಭಾಗ ಕಛೇರಿಯಲ್ಲಿ ಅಧೀಕ್ಷಕ ಇಂಜಿನಿಯರ್(ವಿ)ರವರ ಅಧ್ಯಕ್ಷತೆಯಲ್ಲಿ ನಡೆದ ಜನ ಸಂಪರ್ಕ ನಡಾವಳಿಗಳು.**

ಸಭೆಯಲ್ಲಿ ಹಾಜರಿದ್ದವರು:–

1. ಶ್ರೀ.ಸೋಮರಾಜು.ಎಲ್ : ಅಧೀಕ್ಷಕ ಇಂಜಿನಿಯರ್ (ವಿ),ಮೈಸೂರು ವೃತ್ತ.
2. ಶ್ರೀಮತಿ.ಅನಿತಾ ಬಾಯಿ : ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ), ಮಡಿಕೇರಿ ವಿಭಾಗ.
3. ಶ್ರೀ.ಪಿ.ಎಸ್.ಸುರೇಶ್ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿರಾಜಪೇಟೆ
4. ಶ್ರೀ.ಕೆ.ಎಂ.ದಿಲೀಪ್ : ಸಹಾಯಕ ಇಂಜಿನಿಯರ್(ತ), ವಿರಾಜಪೇಟೆ
5. ಶ್ರೀ.ಕೆ.ಎಸ್.ಸ್ವರಾಗ್ : ಕಿರಿಯ ಇಂಜಿನಿಯರ್(ಕಾಂ), ಸೆಸ್ಕ್, ಸಿದ್ದಾಪುರ.
6. ಶ್ರೀ.ಮನುಕುಮಾರ್.ಹೆಚ್.ಜಿ : ಪ್ರಭಾರ ಕಿರಿಯ ಸಹಾಯಕರು, ಸೆಸ್ಕ್, ಅಮ್ಮತ್ತಿ.
8. ಶ್ರೀ.ಸಿ.ಬಿ.ದೇವಯ್ಯ : ಪ್ರಭಾರ ಕಿರಿಯ ಸಹಾಯಕರು, ಸೆಸ್ಕ್, ಪಾಲಿಬೆಟ್ಟ.
9. ಶ್ರೀ.ಜಗದೀಶ್ : ಪ್ರಭಾರ ಹಿರಿಯ ಸಹಾಯಕರು, ಕಂದಾಯ ಶಾಖೆ, ಸೆಸ್ಕ್, ವಿರಾಜಪೇಟೆ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸಭೆಯಲ್ಲಿ ಹಾಜರಿದ್ದ ಎಲ್ಲರನ್ನೂ ಸ್ವಾಗತಿಸಿ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ) ರವರಾದ ಶ್ರೀ.ಸೋಮರಾಜು ರವರನ್ನು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳುವಂತೆ ವಿನಂತಿಸಿಕೊಂಡರು, ಸಭೆಯಲ್ಲಿ ಹಾಜರಿದ್ದ ಗ್ರಾಹಕರ ಕುಂದುಕೊರತೆಗಳನ್ನು ಆಲಿಸಿ ಈ ಕೆಳಕಂಡಂತೆ ಸಲಹೆ ಸೂಚನೆಗಳನ್ನು ನೀಡಿದರು.

| ಕ್ರಮ ಸಂಖ್ಯೆ | ಸಲಹೆ/ದೂರು ಗಳನ್ನು ನೀಡಿದ ಸದಸ್ಯರ ಹೆಸರು ಮತ್ತು ವಿಳಾಸ | ಸಲಹೆ/ದೂರುಗಳ ವಿವರ | ಅನುಸರಣೆ |
|---|---|---|---|
| 1 | ಶ್ರೀ.ಪೂಣಚ್ಚ, ಚೆಂಬೆಬೆಳ್ಳೂರು ಗ್ರಾಮ<br>ದೂ: 948188307<br>9342163163 | • ಸದರಿಯವರು ವಾಸಿಸುವ ಚೆಂಬೆಬೆಳ್ಳೂರು ಗ್ರಾಮ ವ್ಯಾಪ್ತಿಯಲ್ಲಿ ಸುಮಾರು 20 ಕ್ಕೂ ಹೆಚ್ಚು ಮನೆಗಳ ಜೊತೆಗೆ 3 ಕೃಷಿ ನೀರಾವರಿ ಪಂಪ್‌ಸೆಟ್ ಸ್ಥಾವರಗಳಿದ್ದು ವೋಲ್ಟೇಜ್ ಸಮಸ್ಯೆಯಾಗಿದ್ದು ಹೊಸ ಪರಿವರ್ತಕ ಅಳವಡಿಸಿಕೊಡುವಂತೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ.. | * ಉತ್ತರಿಸಿದ ಅಧೀಕ್ಷಕ ಇಂಜಿನಿಯರ್ ರವರು ಅಮ್ಮತ್ತಿ ಶಾಖಾಧಿಕಾರಿಯವರಾದ ಶ್ರೀ.ಮನುಕುಮಾರ್ ರವರಿಗೆ ಕೂಡಲೇ ಸದರಿಯವರ ಸ್ಥಳವನ್ನು ಪರಿಶೀಲಿಸಿ ಪರಿವರ್ತಕದ ಅವಶ್ಯಕತೆಯಿದ್ದಲ್ಲಿ ಕೂಡಲೆ ಅಂದಾಜು ಪಟ್ಟಿ ಸಲ್ಲಿಸುವಂತೆ ಸೂಚಿಸಿದರು. |
| 2 | ಶ್ರೀ.ಹರ್ಷಕುಮಾರ್, ತೋರಾ, ಕೆದಮುಳ್ಳೂರು<br>ದೂ.8050203167 | • ತಮ್ಮ ಗ್ರಾಮವು ಕುಗ್ರಾಮವಾಗಿದ್ದು, ಸದರಿ ವ್ಯಾಪ್ತಿಯಲ್ಲಿ ವೋಲ್ಟೇಜ್ ಸಮಸ್ಯೆ ಅತಿಯಾಗಿದ್ದು ಹೆಚ್ಚುವರಿ ಪರಿವರ್ತಕ ಅಳವಡಿಸಿಕೊಡುವಂತೆ ಈಗಾಗಲೆ ಹಲವು ಬಾರಿ ಮೌಖಿವಾಗಿ ಹಾಗೂ ಅರ್ಜಿ ಮೂಲಕ ಸಲ್ಲಿಸಿದರು ಈವರಗೆ ಯಾವುದೇ | * ಈ ಬಗ್ಗೆ ಅಧೀಕ್ಷಕ ಇಂಜಿನಿಯರ್ , ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಲ್ಲಿ ಸದರಿ ವಿಷಯ ಬಗ್ಗೆ ಕ್ರಮ ಕೈಗೊಳ್ಳದಿರುವ ಬಗ್ಗೆ ಪ್ರಶ್ನಿಸಿದಾಗ, ಸಹಾಯಕ ಕಾರ್ಯನಿವಾಹಹ ಇಂಜಿನಿಯರ್(ವಿ) ರವರಾದ ಶ್ರೀ.ಪಿ.ಎಸ್.ಸುರೇಶ್ ಸದರಿ ಪ್ರದೇಶವನ್ನು ಈಗಾಗಲೇ ಕೂಲಂಕುಷವಾಗಿ ಪರಿಶೀಲಿಸಲಾಗಿದು, |

| | | | |
|---|---|---|---|
| | | ಪ್ರಯೋಜನವಾಗಿಲ್ಲವೆಂದು ತಿಳಿಸಿದರು. | ಸದರಿ ವ್ಯಾಪ್ತಿಯಲ್ಲಿ ಮನೆಗಳಿಂದ ಮನೆಗಳಿಗೆ ತುಂಬಾ ಅಂತರವಿದ್ದು ಪರಿವರ್ತಕದಿಂದ ಎಲ್.ಟಿ2 ವಾಹಕದಿಂದ ವಿದ್ಯುತ್ ಸಂಪರ್ಕ ನೀಡಲಾಗಿರುತ್ತದೆ, ಆದುದರಿಂದ ವೋಲ್ಟೇಜ್ ಸಮಸ್ಯೆಯಾಗಿರುವುದಾಗಿ ತಿಳಿಸಿದರು ಹಾಗು ಈಗಾಗಲೇ ಹೆಚ್ಚುವರಿ ಪರಿವರ್ತಕ ಅಳವಡಿಸಲು ಅಂದಾಜು ಪಟ್ಟಿಯನ್ನು ಸಲ್ಲಿಸಲಾಗಿದೆಯೆಂದು ತಿಳಿಸಿದರು. |
| 3 | ಶ್ರೀ.ಪಿ.ಜೆ.ವಿನ್ಸೆಂಟ್<br>ಪುಲಿಯೇರಿ ಗ್ರಾಮ<br>ದೂ:9980060436 | • ಪುಲಿಯೇರಿ ಗ್ರಾಮದಲ್ಲಿ ತಾವುಗಳು ವಸತಿ ಪ್ರದೇಶವನ್ನು ಖರೀದಿ ಗೃಹ ನಿರ್ಮಾಣ ಮಾಡಿದ್ದು, ಸದರಿ ನಿವಾಸಕ್ಕೆ ಸುಮಾರು ನಾಲ್ಕು ವರ್ಷಗಳಿಂದ ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದುಕೊಂಡಿದ್ದು, ಶಾಶ್ವತ ವಿದ್ಯುತ್ ಸಂಪರ್ಕ ನೀಡುವಂತೆ ಕೋರಿದರು. | * ಉತ್ತರಿಸಿದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಸದರಿ ವಸತಿ ಪ್ರದೇಶವು ಅನಧಿಕೃತ ಬಡಾವಣೆಯಾಗಿದ್ದು 8 ಮಂದಿ ವಿದ್ಯುತ್ ಈಗಾಗಲೇ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸಲಾಗಿದ್ದು 25 ಕೆ.ವಿ.ಎ ಪರಿವರ್ತಕ ಹಾಗು ಸಂಭಂಧಪಟ್ಟ ವಿದ್ಯುತ್ ಮಾರ್ಗದ ವಿಸ್ತರಣೆಗೆ ಅಂದಾಜು ಸಲ್ಲಿಸಲಾಗರುವುದಾಗಿ ತಿಳಿಸಿದರು, ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಮಾತನಾಡುತ್ತಾ ಸದರಿ ಬಡಾಅಂದಾಜು ಪಟ್ಟಿಯನ್ನು 63 ಕೆ.ವಿ.ಎ ಪರಿವರ್ತಕ್ಕೆ ಬದಲಾಯಿಸಿ ಮರು ಅಂದಾಜು ಪಟ್ಟಿ ಸಲ್ಲಿಸುವಂತೆ ಸೂಚಿಸಿದರು. |
| 4 | ಶ್ರೀ.ಕೆ.ಟಿ.ಸೋಮಯ್ಯ<br>ಶ್ರೀ.ಕೆ.ಟಿ.ಪೂವಯ್ಯ<br>ಶ್ರೀ.ಕೆ.ಕೆ.ಬೋಪಯ್ಯ<br>ಶ್ರೀ.ಕೆ.ಎ.ಚಿಯ್ಯಣ್ಣ<br>ದೂ:9845777408<br>9483688994<br>9740973915<br>9481309620 | • .ತಮ್ಮ ಗ್ರಾಮ ವ್ಯಾಪ್ತಿಯಲ್ಲಿ ಸುಮಾರು 60 ಕ್ಕೂ ಹೆಚ್ಚು ಮನೆಗಳಿದ್ದು ರಾತ್ರಿ ಸಮಯದಲ್ಲಿ ತೀರಾ ವೋಲ್ಟೇಜ್ ಸಮಸ್ಯೆಯಿದ್ದು ಹೊಸ ಪರಿವರ್ತಕವನ್ನು ಅಳವಡಿಸಿಕೊಡುವಂತೆ ಕೋರಿದರು. ಈಗಾಗಲೇ ಹಲವು ಸಭೆಗಳಲ್ಲಿ ತಿಳಿಸಿದರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ತಮ್ಮ ಅಸಮಧಾನ ವ್ಯಕ್ತ ಪಡಿಸಿದರು<br><br>• ಕಂಬದಿಂದ ಕಂಬಕ್ಕೆ ಇರುವ ಅಂತರ ಹೆಚ್ಚಿದ್ದು, ವಾಹಕಗಳು ಜೋತು ಬಿದ್ದಿದ್ದು, ಸರಿಪಡಿಸುವಂತೆ ಕೋರಿದರು.<br><br>• ತಮ್ಮ ಸಂಭಂಧಿಕರ ಮನೆಯ ಪಕ್ಕದಲ್ಲಿಯೇ 11 ಕೆ.ವಿ ವಿದ್ಯುತ್ ಮಾರ್ಗ ಹಾದುಹೋಗಿದ್ದು ಕಂಬವನ್ನು ಸ್ಥಳಾಂತರ ಮಾಡುವಂತೆ ಶ್ರೀ.ಕೆ.ಎ.ಚಿಯ್ಯಣ್ಣ ರವರು ಕೋರಿದರು | * ಉತ್ತರಿಸಿದ ಅಧೀಕ್ಷಕ ಇಂಜಿನಿಯರ್ ರವರು ಕೂಡಲೇ ಸ್ಥಳ ಪರಿಶೀಲನೆ ಮಾಡಿ ವಿಸ್ತೃತ ವರಧಿಯೊಂದಿಗೆ ಅಂದಾಜುಪಟ್ಟಿ ಸಲ್ಲಿಸುವಂತೆ ಸಂಭಂಧಪಟ್ಟ ಶಾಖಾಧಿಕಾರಿಗಳಿಗೆ ಸೂಚನೆ ನೀಡಿದರು ಈ ಬಗ್ಗೆ ಉತ್ತರಿಸಿದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಈ ಬಗ್ಗೆ ಉತ್ತರಿಸುತ್ತಾ ಈಗಾಗಲೇ ಸದರಿ ಸ್ಥಳ ಪರಿಶೀಲನೆ ಮಾಡಿ ಅಭಿವೃದ್ಧಿ ಹಾಗು ವಿಸ್ತರಣೆ ಲೆಕ್ಕಶೀರ್ಷಿಕೆಯಡಿ ಅಂದಾಜು ಪಟ್ಟಿ ತಯಾರಿಸಿ ವಿಭಾಗೀಯ ಕಚೇರಿಗೆ ಸಲ್ಲಿಸಿದ್ದು ನಿಗಮ ಕಛೇರಿಯಿಂದ ಅನುದಾನ ದೊರೆತೊಡನೆ ಮಂಜೂರಾತಿ ಪಡೆದುಕೊಂಡುಕಾಮಗಾರಿ ನಿರ್ವಹಿಸಲಾಗುವುದೆಂದು ತಿಳಿಸಿದರು.<br><br>* ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ರವರು ಮಾತನಾಡುತ್ತಾ ಸದರಿ ವ್ಯಾಪ್ತಿಯಲ್ಲಿ ಜೋತು ಬಿದ್ದಿರುವ ವಿದ್ಯುತ್ ಮಾರ್ಗಗಳ ವಾಹಕಗಳನ್ನು ಎಳೆದು ಬಿಗಿಗೊಳಿಸುವಂತೆಯೂ ಅವಶ್ಯವೆನಿಸಿದಲ್ಲಿ ಇಲಾಖಾ ವತಿಯಿಂದಲೇ ವಿದ್ಯುತ್ ಕಂಬಗಳನ್ನು ಅಳವಡಿಸಲು ಕ್ರಮ ಕೈಗೊಳ್ಳುವಂತೆ ತಪ್ಪಿದಲ್ಲಿ ಆನೆಕಾರಿಡಾರ್ ಯೋಜನೆಯಡಿ ಮಧ್ಯಂತರ ಕಂಬಗಳನ್ನು ಅಳವಡಿಸಿ ವಿದ್ಯುತ್ ಮಾರ್ಗಗಳನ್ನು ಸುಸ್ಥಿತಿಯಲ್ಲಿಟ್ಟು ಕೊಳ್ಳುವಂತೆಯೂ ಹಾಗು ವಿದ್ಯುತ್ ಅಪಘಾತ ಗಳುಂಟಾಗದಂತೆ ಎಚ್ಚರವಹಿಸುವಂತೆಯೂ ಶಾಖಾಧಿಕಾರಿಗಳಿಗೆ ಸೂಚನೆ ನೀಡಿದರು.<br><br>* ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಮಾತನಾಡುತ್ತಾ ನಿಗಮದ ನಿಯಮಾನುಸಾರ ವಿದ್ಯುತ್ ಮಾರ್ಗದ ಸ್ಥಳಾಂತರವನ್ನು ಸ್ವಯಂ ನಿರ್ವಹಣಾ ಯೋಜನೆಯಡಿ ನಿರ್ವಹಿಸಿಕೊಳ್ಳುವಂತೆ ತಿಳಿಸಿ, ಶಾಖಾಧಿಕಾರಿಗಳಿಗೆ ಸ್ವಯಂ ನಿರ್ವಹಣಾ ಯೋಜನೆಯಡಿ ಅಂದಾಜು ಪಟ್ಟಿಯನ್ನು ತಯಾರಿಸಿ ಕೊಡುವಂತೆ ಸೂಚಿಸಿದರು. |
| 5 | ಶ್ರೀ.ಪಿ.ಎ.ನಂಜಪ್ಪ<br>ಬೇಟೋಳಿ ಗ್ರಾಮ<br>ದೂ:9008738243 | • ಬೇಟೋಳಿ ಗ್ರಾಮ ವ್ಯಾಪ್ತಿಯಲ್ಲಿ ವಿದ್ಯುತ್ ಅಡಚಣೆ ಅಧಿಕವಾಗಿದ್ದು ಮಿತಗೊಳಿಸುವಂತೆ ಕೇಳಿಕೊಂಡರು. | * ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ಕೂಡಲೇ ಕ್ಷೇತ್ರ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಶಾಖಾಧಿಕಾರಿಗಳಿಗೆ ಸೂಚಿಸಿದರು. |

| | | | |
|---|---|---|---|
| 6 | ಶ್ರೀ.ರಾಜೀವ.ಪಿ.ಕೆ<br>ಹೆಗ್ಗಳ ಗ್ರಾಮ<br>ದೂ: 8762818773 | • ಹೆಗ್ಗಳ ಗ್ರಾಮದಲ್ಲಿರುವ ತಮ್ಮ ಮನೆಯ ಮೇಲೆ ವಿದ್ಯುತ್ ತಂತಿಯ ಹಾದು ಹೋಗಿದ್ದು ಸ್ಥಳಾಂತರ ಮಾಡುವಂತೆ ಕೋರಿದರು. | * ಉತ್ತರಿಸಿದ ಅಧೀಕ್ಷಕ ಇಂಜಿನಿಯರ್(ವಿ) ತಾವುಗಳು ವಿದ್ಯುತ್ ತಂತಿಯ ಕೆಳಗೆ ಮನೆ ಕಟ್ಟಿರುವುದರಿಂದ ಸ್ವಯಂ ನಿರ್ವಹಣಾ ಯೋಜನೆಯಡಿ ವಿದ್ಯುತ್ ಕಂಬವನ್ನು ಸ್ಥಳಾಂತರಕ್ಕೆ ಅರ್ಜಿ ಸಲ್ಲಿಸಿದಲ್ಲಿ ಅಂದಾಜು ಪಟ್ಟಿ ತಯಾರಿಸಿ ಕೊಡುವಂತೆ ಶಾಖಾಧಿಕಾರಿಗಳಿಗೆ ಸೂಚಿಸಿದರು. |

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಆದ ಶ್ರೀ.ಸುರೇಶ್‌ರವರು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದನೆಗಳನ್ನು ಸಲ್ಲಿಸುತ್ತ ನಿಗಮದ ವತಿಯಿಂದ ಗ್ರಾಹಕರಿಗೆ ಉತ್ತಮ ಸೇವೆ ಸಲ್ಲಿಸಲು ಸರ್ವ ಪ್ರಯತ್ನ ಮಾಡಲಾಗುವುದೆಂದು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ತಮ್ಮ ವಿಶ್ವಾಸಿ,

ಅಧೀಕ್ಷಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು.

ಪ್ರತಿಗಳನ್ನು ಅವಗಾಹನೆಗಾಗಿ:-

1. ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರ ಅವಗಾಹನೆಗಾಗಿ.
2. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ನಿಗಮ ಕಾರ್ಯಾಲಯ,ಚಾವಿಸನಿನಿ, ಮೈಸೂರು ರವರ ಅವಗಾಹನೆಗಾಗಿ
3. ವ್ಯವಸ್ಥಾಪಕ ನಿರ್ದೇಶಕರು [illegible] ಚಾವಿಸನಿನಿ, ಮೈಸೂರು ರವರ ಅವಗಾಹನೆಗಾಗಿ
4. ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರ ತಾಂತ್ರಿಕ ಸಹಾಯಕರಿಗೆ ಕಳುಹಿಸುತ್ತಾ ಸಭಾ ನಡಾವಳಿಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕ ಗಮನಕ್ಕೆ ತರುವಂತೆ ಕೋರಿದೆ
5. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ ಸೆಸ್ಕ್, ಮಡಿಕೇರಿ ರವರ ಅವಗಾಹನೆಗಾಗಿ.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ & ಪಾ ಉಪ-ವಿಭಾಗ, ಚಾ.ವಿ.ಸ.ನಿ.ನಿ, ವಿರಾಜಪೇಟೆ ರವರ ಅವಗಾಹನೆಗಾಗಿ.
7. ಕಛೇರಿ ಕಡತಕ್ಕೆ